# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.229-2013** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರಾಜೇಂದ್ರ<br>ಸೂರಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 08-09-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಟಿ.ಆರ್ ವಕೀಲರಿಂದಃ**

10. ಸರ್ವೆ ನಂ.120 ರ ದಕ್ಷಿಣಕ್ಕೆ ಸರ್ವೆ ನಂ.123 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನಾನು ವ್ಯವಸಾಯ ಮಾಡುತ್ತೇನೆ. ನಾನು ದಾವಾದಲ್ಲಿ ಕೋರಿರುವ ದಾರಿಯೂ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಸರ್ವೆ ನಂ.122 ಮತ್ತು ಸರ್ವೆ ನಂ.123 ರ ಮಧ್ಯಭಾಗದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.122 ಜಮೀನು ಯಾರಿಗೆ ಸೇರಿದ್ದು ಮತ್ತು ಯಾರ ಸಾಗುವಳ್ಳಿಯಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.120 ದಕ್ಷಿಣಕ್ಕೆ ಸರ್ವೆ ನಂ.123 ಇದ್ದು ಸದರಿ ಸ್ವತ್ತು 6 ಪೋಡುಗಳು ಆಗಿದ್ದು, ಅವುಗಳ ಪೈಕಿ ಸರ್ವೆ ನಂ.123/1 ರಲ್ಲಿ ಗುರುಸ್ವಾಮಿ ರವರು, ಸರ್ವೆ ನಂ.123/2 ರಲ್ಲಿ ಶಿವಲಿಂಗಸ್ವಾಮಿ ರವರು, ಸರ್ವೆ ನಂ.123/3 ರಲ್ಲಿ ನಾಗಮ್ಮ, ಸರ್ವೆ ನಂ.123/4 ರಲ್ಲಿ ನಂಜುಂಡಪ್ಪ ಬಿನ್ ಬಸವಣ್ಣ, ಸರ್ವೆ ನಂ.123/5 ಶಾಂತಮ್ಮ ಕೋಂ ನಾಗಣ್ಣ ಮತ್ತು ಅವರ ಮಕ್ಕಳು ಮತ್ತು ಸರ್ವೆ ನಂ.123/6 ರಲ್ಲಿ ಮಹದೇವಪ್ಪನವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಸೂರಹಳ್ಳಿ ಗ್ರಾಮದ ನಕಾಶೆಯನ್ನು ತೋರಿಸಿದ್ದು, ಸಾಕ್ಷಿಯು ಗ್ರಾಮ ನಕಾಶೆಯನ್ನು ಒಪ್ಪಿಕೊಂಡಿರುತ್ತಾರೆ.

11. ನಾನು ಯಾವುದೇ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುವುದಿಲ್ಲ ವ್ಯವಸಾಯ ಮಾಡುತ್ತೇನೆ. ನಾನು ನಂಜನಗೂಡಿನಲ್ಲಿ ಭೋಗ್ಯದ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸೂರಹಳ್ಳಿಯಲ್ಲಿ ವಾಸವಾಗಿರುತ್ತೇನ ಎಂದರೆ ಸರಿಯಲ್ಲ. ನಾನು ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಿಣಕ್ಕೆ ಇರುವ ಸರ್ವೆ ನಂ.123/1 ರಿಂದ ಸರ್ವೆ ನಂ.123/6 ರ ಸ್ವತ್ತುಗಳ

ಮಾಲೀಕರನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಕೋರಿರುವ ಓಣಿಯು ಸರ್ವೆ ನಂ.123/1 ರಿಂದ ಸರ್ವೆ ನಂ.123/6 ರವರೆಗೆ ಹಾದು ಹೋಗುವುದರಿಂದ ಸದರಿ ಸರ್ವೆ ನಂಬರ್ ಗಳ ಮಾಲೀಕರು ಈ ದಾವೆಯ ಅವಶ್ಯಕತೆ ಪಕ್ಷಕಾರರಾಗಿದ್ದು, ನಾನು ಸದರಿಯವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಹಾಗೂ ಮಾಡುವುದೂ ಇಲ್ಲ ಎಂದು ನುಡಿಯುತ್ತಾರೆ. ನಾನು ದಾವಾದಲ್ಲಿ ಕೋರಿರುವ ಓಣಿಯು ಸರ್ವೆ ನಂ.122 ರಲ್ಲಿಯೂ ಹಾದು ಹೋಗುತ್ತಿದ್ದ, ಸದರಿ ಸ್ವತ್ತಿನ ಮಾಲೀಕರಾದ ಯೋಗೇಶ್ ಬಿನ್ ರಾಜಣ್ಣ ರವರನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ದಾವಾದಲ್ಲಿ ಕೋರಿರುವ ಓಣಿ ಹಾದು ಹೋಗಿರುವ ಪ್ರದೇಶವು ನನ್ನದಲ್ಲ ಎಂದರೆ ಸರಿ. ಊರಿನಿಂದ ಬರುವ ದಾರಿಯೂ ಸರ್ವೆ ನಂ.123 ರ ಸರ್ವೆ ನಂಬರ್ ನಲ್ಲಿ ಸರ್ವೆ ನಂ.122 ರ ದಕ್ಷಿಣ ಭಾಗಕ್ಕೆ ತಿರುಗಿ ಪೂರ್ವಕ್ಕೆ ಹೋಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತನ್ನು ಸಾಗುವಳಿ ಮಾಡದೇ ಇರುವುದರಿಂದ ಊರಿನಿಂದ ಬರುವ ದಾರಿಯೂ ಸರ್ವೆ ನಂ.123 ರಲ್ಲಿ ಯಾವ ದಿಕ್ಕಿಗೆ ತಿರುಗುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಎಂದಿಗೂ ಸಾಗುವಳಿ ಮಾಡದೇ ಇರುವುದರಿಂದ ಸರ್ವೆ ನಂ.123 ರಲ್ಲಿ ಎಷ್ಟು ಪೋಡುಗಳು ಇವೆ ಹಾಗೂ ಯಾರು ಸಾಗುವಳಿ ಮಾಡುತ್ತಿದ್ದಾರೆ ಹಾಗೂ ಸರ್ವೆ ನಂ.122 ಯಾರ ಸ್ವಾಧೀನದಲ್ಲಿ ಇದೆ, ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಗೆ ಹೋಗಲು ದಾವಾ ಬಿ ಷೆಡ್ಯೂಲ್ ದಾರಿ ಇದೆ ಎಂದು ಗ್ರಾಮ ನಕಾಶೆಯಲ್ಲಿ ನಮೂದು ಆಗಿದು ಎಂದು ಹೇಳಿದ್ದು ಆದರೆ ಆ ರೀತಿ ದಾರಿ ಗ್ರಾಮ ನಕಾಶೆಯಲ್ಲಿ ನಮೂದು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಗ್ರಾಮ ನಕಾಶೆಯಲ್ಲಿ ನಮೂದು ಇಲ್ಲದೇ ಇರಬಹುದು, ಆದರೆ ನಾವು ಬಿ ಷೆಡ್ಯೂಲ್ ದಾರಿಯಲ್ಲೇ ತಿರುಗಾಡುತ್ತಿರುತ್ತೇವೆ ಎಂದು ನುಡಿಯುತ್ತಾರೆ. ಊರಿನಿಂದ ಬರುವ ದಾರಿಯು ಸರ್ವೆ ನಂ.96 ರ ಮೂಲಕ ಹಾದು ಹೋಗುತ್ತದೆ ಸದರಿ ಸರ್ವೆ ನಂ.96 ರ ಒಟ್ಟು ವಿಸ್ತೀರ್ಣ 54 ಎಕರೆ ಇದ್ದು ಅದು ಸರ್ಕಾರಿ ಜಮೀನು ಆಗಿದ್ದು ಸದರಿ ದಾರಿ ಮುಖೇನ ದಾವಾ ಎ ಷೆಡ್ಯೂಲ್ ಸ್ವತ್ತಿಗೆ ಹೋಗಬಹುದು ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ನಲ್ಲಿ ನೀಡಿರುವ ಚೆಕ್ಕುಬಂದಿಯು ಸರಿ ಇರುವುದಿಲ್ಲ, ನನ್ನ ಜಮೀನು ಒಂದೇ ತಾಕಿನಲ್ಲಿ ಇರುವುದಿಲ್ಲ, ನನ್ನ ಜಮೀನು ಅರ್ಧ ನನಗೆ ಸೇರಿದ್ದರೆ ಇನ್ನರ್ಧ ಗುರುಸಿದ್ದಮ್ಮನವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗುರುಸಿದ್ದಮ್ಮನವರಿಗೆ ಅರ್ಧ ಜಮೀನು ಇರುತ್ತದೆ ಎಂದು

ನುಡಿಯುತ್ತಾರೆ. ನಾನು ನನ್ನ ಕುಟುಂಬದ ಏಕೈಕ ವಿದ್ಯಾವಂತನಾಗಿರುವುದರಿಂದ ನನ್ನ ಮುಖೇನ ವಿಚಾರಣೆ ನೀಡಿಸಿದ ಪಕ್ಷದಲ್ಲಿ ಪ್ರತಿವಾದಿಗೆ ತೊಂದರೆ ನೀಡಬಹುದು ಎಂಬ ಉದ್ದೇಶದಿಂದ ನನಗೆ ಸಾಮಾನ್ಯ ಅಧಿಕಾರ ಪತ್ರವನ್ನು ನೀಡಿದ ನನ್ನ ಮುಖೇನ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಸಲಾಗುತ್ತಿದೆ ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**